# ಕೆಂಪು ಮಾಡಿನ ಮನೆ

ಹಾಸಗೆ ದೋಣಿ ಇಳಿದು ಹಸಿಕಾಲು ಕೊಡವುತ್ತ ಸೀದಾ ನಾಕು ದಾಪು ಹಾಕಿದರೆ, ಬಲಕ್ಕೆ ಅಂದರೆ ಗುಡಿಯಮ್ಮನ ಎದುರು ರಸ್ತೆಯಲ್ಲಿ ಒಂದು ಮಾಡು ಕಳಚಿದ ಮನೆ ಕಾಣುತ್ತದೆ. ಆ ಮನೆ ಹುಟ್ಟಿದಾಗಿನಿಂದ ಹಾಗಿರಲಿಲ್ಲ. ಮಾಪಿಳ್ಳೆಯರ ಕೇರಿಯ ಅಂಚಿಗೆ ತಾಗಿ ರಸ್ತೆಗೆ ದಣಪೆಯಿದ್ದ ಮೂರು ಮಾಡಿನ ಆ ಮನೆ ಯಾವಾಗಲೂ ಗಲಗಲ ಅಂತಿರುತ್ತಿತ್ತು. ಈಗ ಚಪ್ಪೆ ಕಿತ್ತು ತಾಕಿದರೆ ಕೈಗೆ ನೆತ್ತರು ಒಸರುವಂತಾಗಿದ್ದ ದಣಪೆಯಿದೆಯಲ್ಲ, ಅದು ಆಗ ಕೆಂಪು ಸಿಮೆಂಟಿನ ಗಾರೆಯಲ್ಲಿ ಲಕಲಕ ಮುಖಕ್ಕೆ ಬಿಂದಿ ಹಚ್ಚಿಕೊಳ್ಳಬಹುದು ಅಂಥಾ ಕನ್ನಡಿ. ನಾವು ಬೆಳಗಿನ ಜಾವ ಕಾಲೇಜಿಗೆ ಅಂತ ಓಡುವಾಗ, ದಿನಂಪ್ರತಿ ಅಲ್ಲೇ ಆ ದಣಪೆ ದಾಟುವವರಂತೆ ನಿಂತಿರುತ್ತಿದ್ದರು ಗರ್ನಾಲು ಸಾಬರು. 'ತಂಗಿ ಹುಶಾರು ಹುಶಾರು ಮಗಾ' ಎಂದೋ, 'ದೋಣಿ ಬಿಟ್ಟಿಲ್ವೆ ಮಗಾ, ಸಾವಕಾಸ ಹೋಗಿ' ಎಂದೋ, 'ಓ ನಾರಾಯಣಾ ಹ್ವೊ ಹ್ವೋ' ಎಂದೋ ಕೂಗು ಹಾಕಿ, ದೋಣಿ ನಿಲ್ಲಿಸು ಮಾರಾಯಾ ಎಂಬ ಸೂಚನೆಯನ್ನು ನಮ್ಮ ಪರವಾಗಿ ಕೊಡುತ್ತಿದ್ದುದರಿಂದ; ನಮ್ಮೂರ ಗರ್ನಾಲು ಸಾಬರೆಂದರೆ ನಮಗೆ ಅಕ್ಕರೆಯೇ. ಇಳಿ ಮಧ್ಯಾಹ್ನ ನಾವು ಹೊಳ್ಳಿ ಬರುವಾಗ, ಅದೇ ದಣಪೆಯ ಕಟ್ಟೆ ಮೇಲೆ ವಾರೆಮುಂಡದ ಚೌಕಳಿ ಅಂಗಿಯ ಗರ್ನಾಲು ಸಾಬರು ಕೂತಿರುತ್ತಿದ್ದರು. ನಾವು ಮೂವರಲ್ಲಿ ಒಬ್ಬಳು ಬರಲಿಲ್ಲವೆಂದರೂ 'ತಂಗಿ, ಇನ್ನೊಂದ್ ಬಂದಿಲ್ವಲ್ಲೇ ಎಂಥಕೆ?' ಅಂತ ಪ್ರಶ್ನೆ ಹಾಕಿದರೇ, 'ಈ ಸಾಬರದೊಂದ ಕಟ್ಟೆ ಪಂಚಾಯ್ತಿ...' ಎಂದು ನಮ್ಮೊಳಗೇ ಗೊಣಗಿಕೊಂಡರೂ; ಅವರೆದುರಿಗೆ ಮಾತ್ರ ಎಂದೂ ನಾವು ದಿಗಾರ ಉತ್ರ ಕೊಟ್ಟಿದ್ದಿಲ್ಲ.

ಒಂದೇ ಊರೇ ಆಗಿದ್ದರೂ ಮಾಪಿಳ್ಳೆ ಕೇರಿಯೊಂದು ನೆಟ್ಟಗೆ ಗೆರೆ ಕೊರೆದ ಹಾಗೆ ರಸ್ತೆಯ ಆಚೆಗೇ ಇದ್ದುಬಿಟ್ಟಿದ್ದರಿಂದಲೋ, ಆ ಕೇರಿಯಿಂದ ಹೆಣ್ಣುಮಕ್ಕಳು ಶಾಲೆಗೆ ಬಂದದ್ದೂ ಇಲ್ಲವೇ ಇಲ್ಲ ಎಂಬಷ್ಟು ಕಡಿಮೆಯಿದ್ದುದರಿಂದಲೋ, ಮಾಪಿಳ್ಳೆಯರ ಬದುಕು ದೋಣಿರಂಪಣಿಯ ಹೊಂದಾಣಿಕೆಯ ಕಾರಣದಿಂದ ಬೆಸ್ತರ ಕೇರಿಯೊಂದಿಗೇ ಕೂಡಿಕೊಂಡಿದ್ದರಿಂದಲೋ ನಮಗದು ರಸ್ತೆಯಲ್ಲಿ ಹಾದಾಡುವಾಗ, ಕಂಡಿದ್ದೆಷ್ಟೋ ಅಷ್ಟೇ ಎಂಬಂತಾಗಿತ್ತು. ಕಳ್ಳಿಬೇಲಿಯ ಆಚೆ

